ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೆ, ಈ ಸದನದಲ್ಲೇ ಎರಡು ಅಭಿಪ್ರಾಯಗಳಿವೆ. ವಿರೋಧಪಕ್ಷದ ನಾಯಕರು ನೀರಾವರಿ ಬಾಂಡ್‌ಗಳನ್ನು ಮಾಡಬೇಕೆಂದು ಹೇಳುತ್ತಾರೆ. ಪ್ರೊ. ನಂಜುಂಡಸ್ವಾಮಿಯವರು ಬಾಂಡ್‌ಗಳನ್ನು ಮಾಡುವುದು ಸರಿಯಲ್ಲವೆಂದು ಹೇಳುತ್ತಾರೆ. ಅವರು ಅದರ ಅವಶ್ಯಕತೆ ಇಲ್ಲವೆನ್ನುವ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ನನಗೆ ವಿಶ್ವಾಸ ಇದೆ ಈ ನೀರಾವರಿ ಬಾಂಡ್ ಗಳಿಗೆ ಕೇಂದ್ರ ಸರ್ಕಾರದವರು ಏನಾದರೂ ಒಪ್ಪಿಗೆ ಕೊಟ್ಟರೆ ಅದು ಯಾವುದೇ ಪರಿಸ್ಥಿತಿಯಲ್ಲಿಯೂ ನಾವು ಸಕ್ಸಸ್ ಆಗುತ್ತೇವೆ. ಈ ಯೋಜನೆಗಳನ್ನು ಪೂರ್ಣ ಮಾಡಲಿಕ್ಕೆ.

Mr. SPEAKER - ಸರಿ. I Wish you all the best

ನೀರಾವರಿ ಯೋಜನೆ

2276 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೋಡು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ಅನುಮೋದಿಸಲಾದ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆಯೆಷ್ಟು?

ಆ) ಮೇಲ್ಕಂಡ ಯಾವುದೇ ಯೋಜನೆಗಳನ್ನು ಕಾರ್ಯರೂಪಕ್ಕೆ ತರದಿರಲು ಕಾರಣಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸಣ್ಣ ನೀರಾವರಿ ಕಾ.ಜ.ವಿ.ನಿ.ಕೃ.ಜುಳಿ. ನಿ.ಒಟ್ಟು

ಬೆಂಗಳೂರು	ಮೈಸೂರು	ಬಿಜಾಪುರ
56	60	116

ಆ) ಸಣ್ಣ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕಾರಣಗಳು. ವಿವರವಾದ ತನಿಖೆ ನಡೆಸಬೇಕಾದ್ದರಿಂದ, ಅರಣ್ಯ ಭೂಮಿ ಬಿಡುಗಡೆಯಾಗದೇ ಇರುವುದರಿಂದ, ಭೂ ಸ್ವಾಧೀನ ತಡೆಯಿಂದಾಗಿ, ಹಾಗೂ ಸಾಕಷ್ಟು ಅನುದಾನವನ್ನು ಆಯವ್ಯಯದಲ್ಲಿ ಮಾಡದಿರುವುದು.

ನಿಗಮದ ನಿಯಮದಂತೆ, ಯೋಜನಾ ವೆಚ್ಚದ ಶೇಕಡ 15ರಷ್ಟು ಹಣವನ್ನು ಫಲಾನುಭವಿಗಳು ತುಂಬಲು ನಿರಾಕರಿಸಿರುವುದರಿಂದಲೂ, ಹಾಗೂ ನಿಗಮ ಮತ್ತು ನಬಾರ್ಡ್‌ಗಳ ಮಧ್ಯ ಯೋಜನಾ ವರದಿಗಳನ್ನು ತಯಾರಿಸುವಲ್ಲಿ ಮತ್ತು ವರದಿಗಳಲ್ಲಿ ಅವಶ್ಯಕ ಅಳವಡಿಕೆಗಳನ್ನು ಪ್ರಸ್ತಾಪಿಸಿರುವುದರಿಂದ ತಡವಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಎಷ್ಟು ಪ್ರಾಜೆಕ್ಟ್‌ಗಳು ಸಣ್ಣ ನೀರಾವರಿ, ಏತ ನೀರಾವರಿ ಆಗಿದ್ದಾವೆಂದರೆ ನಿಲ್ ಎಂದು ತಿಳಿಸಿದ್ದಾರೆ. ಒಂದು ಸಲವೂ ಸಣ್ಣ ನೀರಾವರಿ ಸರ್ಕಾರದಿಂದ ಆಗಿಲ್ಲ. ಆದರೆ ನನಗೆ ತಿಳಿದಮಟ್ಟಿಗೆ ಮಾನ್ಯ ದೇವೇಗೌಡರು ಬಂದಾಗ ಕೂಡ ಅಲ್ಲಿ ಬಹಳಷ್ಟು ಫೌಂಡೇಷನ್ಸ್, ಹಾಕಿ ಎಸ್ಟಿಮೇಷನ್ ತಯಾರು ಮಾಡಿ ಎಸ್ಟಿಮೇಟ್ಸ್‌ಗಳನ್ನು ಸರ್ಕಾರಕ್ಕೂ ಕೊಟ್ಟಿದ್ದಾರೆ. ಬಜೆಟ್ ಸ್ಯಾಂಕ್ಷನ್ ಆಗಿಲ್ಲ. ಎರಡನೆಯ ಪ್ರಶ್ನೆ ಕೇಳಿದಾಗ ಒಂದು ಫಾರೆಸ್ಟ್ ಲ್ಯಾಂಡ್ ಇದ್ದು ಸರ್ಕಾರ ಇದನ್ನು ಭೂ ಸ್ವಾಧೀನ ಮಾಡಿಲ್ಲ ಎಂಬ ಒಂದು ರಾಂಗ್ ಇನ್‌ಫಾರ್ಮೇಷನ್ ಕೊಟ್ಟಿದ್ದಾರೆ. ಇದಕ್ಕೆ ಫಾರೆಸ್ಟ್ ಬರುವುದೂ ಇಲ್ಲ; ಲ್ಯಾಂಡ್ ಅಕ್ವಿಸಿಷನ್ ಬರುವುದೂ ಇಲ್ಲ.

ಕೆಲಸ ಪ್ರಾರಂಭ ಮಾಡಿಲ್ಲ. ನಾನು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಕರೆಸಿದಾಗ ಈ ವರ್ಷ ಸ್ಟಾರ್ಟ್ ಮಾಡುತ್ತೇವೆ, ಇನ್ನು ಆರು ತಿಂಗಳಲ್ಲಿ ಸ್ಟಾರ್ಟ್ ಮಾಡುತ್ತೇವೆಂದು ಕಳೆದ ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಆ ಕಾರಣ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಕಾರ್ಯವನ್ನು ನಾವು ಸಣ್ಣ ನೀರಾವರಿಯಲ್ಲಿ ಫಿಸಿಬಿಲಿಟಿ ಬಂದರೆ ಖಂಡಿತ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಶಿರಗೊಪ್ಪ ತಾಲ್ಲೂಕಿನಲ್ಲಿ ಬಹಳಷ್ಟು ತುಂಗಭದ್ರಾ ನದಿಯ ಉಪ ಕಾಲುವೆಗಳು ವೇಸ್ಟಾಗಿ ಕರ್ನಾಟಕದಿಂದ ಬಹಳಷ್ಟು ನೀರು ಆಂಧ್ರಾಕ್ಕೆ ಹೋಗುತ್ತಿದೆ. ಅದನ್ನು ತಡೆಗಟ್ಟಬೇಕು. ನಮ್ಮ ರೈತರಿಗೆ ಒಳ್ಳೆಯದಾಗಬೇಕು ಅಂದರೆ ಬಹಳಷ್ಟು ಸಣ್ಣ ನೀರಾವರಿ ಮಾಡಬೇಕು. ಆ ದೃಷ್ಟಿಯಿಂದ ತಮಗೆ ಕೂಡ ಒಂದು ಲೆಟರ್ ಬರೆದಿದ್ದೇನೆ. ಬಳ್ಳಾರಿ ಡಿವಿಜನ್ ಮಾಡಬೇಕು. ಈಗ ಕರ್ಸ್‌ಪಾಂಡೆನ್ಸ್ ಬಹಳ ಲೇಟಾಗಿ ಧಾರವಾಡಕ್ಕೆ, ಬಿಜಾಪುರಕ್ಕೆ ಹೋಗಿ ಬಹಳಷ್ಟು ರೈತರಿಗೆ ಅನ್ಯಾಯವಾಗುತ್ತದೆ ಎಂದು ತಿಳಿಸಿ ಕಾಗದ ಬರೆದಿದ್ದೇನೆ. ಇಂಥ ನೀರಾವರಿ ಸ್ಕೀಮ್‌ಗಳು ಕೋಲಾರದಂತಹ ಕಡೆ ಮಾಡಲು ಆಗುವುದಿಲ್ಲ. ಆದರೆ ಬಳ್ಳಾರಿಯಲ್ಲಿ ಬಹಳಷ್ಟು ನೀರು ಇರುವುದಕ್ಕೋಸ್ಕರ ಅದನ್ನು ಉಪಯೋಗಿಸಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಒಂದು ಡಿವಿಷನಲ್ ಆಫೀಸನ್ನು ಮಾಡಿ ಕಾರ್ಯಕ್ರಮವನ್ನು ಆದಷ್ಟು ಬೇಗ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಬಹುತೇಕ ಸದಸ್ಯರಿಗೆ ಗೊತ್ತಿರಬಹುದು, ಇದನ್ನು ನಮ್ಮ ಬಿಜಾಪುರ ಕಾರ್ಪೋರೇಷನ್ ಅಡಿಯಲ್ಲಿ ಕೈಗೊಳ್ಳುವುದಕ್ಕೆ ಆಗುವುದಿಲ್ಲ, ಏಕೆಂದರೆ ನಬಾರ್ಡ್‌ನಿಂದ ಹಣಕಾಸಿನ ಸಹಾಯ ಬರುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಲಿಫ್ಟ್ ಮಾಡುವಂತಹದ್ದು ಏನಾದರೂ ಇದ್ದರೆ ಅದನ್ನು ನಾನು ಖಂಡಿತ ಯೋಚನೆ ಮಾಡುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆ

2358 - ಶ್ರೀ ಕೆ.ಬಿ. ಕೋಳಿವಾಡ (ರಾಣಿಬೆನ್ನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ತಾಂತ್ರಿಕ ಸಮಿತಿಯು ಒಪ್ಪಿಗೆ ನೀಡಿದೆಯೇ?

ಆ) ಯೋಜನೆ ತಗಲುವ ವೆಚ್ಚ ಎಷ್ಟು?

ಇ) ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಬೇಕಾಗುವ ಸಮಯ

ಈ) ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ರಾಣೆಬೆನ್ನೂರಿನಲ್ಲಿ ಇಂಜಿನಿಯರಿಂಗ್ ವೃತ್ತದ ಕಛೇರಿಯನ್ನು ತೆರೆಯಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ನೀಡಿದೆ.

ಆ) 271.41 ಕೋಟಿ ರೂಪಾಯಿಗಳು (1988-89ರ ಸಾಲಿನ ಪ್ರಕಾರ).